Rs. 53,782 so far. They are getting the salary right from the establishment. i.e. from 1980 onwards. That school doesn't come under grant-in-aid and it is not approved, but still the teachers are getting their salary and this fact has been accepted. When I put a further question whether it has been brought to the notice of the Government by the DDPI, Gulbarga and the Deputy Secretary, Zilla Parishad and what action has been taken, the reply given was, both Marathi medium and Kannada medium are running in the same school, and because of this confusion, salary has been paid. Regarding action taken, they have replied that no action has been taken. If such a grave offence has been committed, I would expect that the government will immediately suspend those officers. The money involved here is Rs. 53,000/- and it has been going on for the last eight years. So, I demand through the Chair, that such officers who are involved in this should be immediately suspended and enquiry is to be conducted.

ಶ್ರೀ ಎಂ. ವೀರಪ್ಪ ಮೊಯಿಲಿ : ಸನ್ಮಾನ್ಯ ಅಧ್ಯಕ್ಷರೆ. 'ಶಿಶುನಿಕೇತನ' ಕನ್ನಡ ಮಾಡಿಯಂ ಪ್ರಾಥಮಿಕ ಶಾಲೆ ಏನು ಇದೆ. ಅದರ ಜೊತೆ ಮರಾಠಿ ಮಾಡಿಯಂ ಶಾಲೆಯನ್ನು ಕೂಡಾ ಸೇರಿಸಿದೆ. ಮರಾಠಿ ಮಾಡಿಯಂ ಶಾಲೆ ನಿಜವಾಗಿಯೂ ಅದು ಅನುದಾನಕ್ಕೆ ಒಳಪಟ್ಟಿರಲಿಲ್ಲ., ಆದರೆ ಅಲ್ಲಿ ಪೇಮೆಂಟ್ ಆಗಿದೆ. ಅನುದಾನಕ್ಕೆ ಒಳಪಡದಿದ್ದರೂ ಅವರಿಗೆ ಅಲ್ಲಿ ಸಂಬಳವನ್ನು ಕೊಟ್ಟಿದ್ದಾರೆ. ಅದು ಸರ್ಕಾರದ ಗಮನಕ್ಕೆ ಬಂದಕೂಡಲೇ ಆ ಸಂಬಳ ಬಿಡುಗಡೆ ಮಾಡುವಂಥದ್ದನ್ನು ಈಗ ನಿಲ್ಲಿಸಿದ್ದೇವೆ. ಈಗಾಗಲೇ 53.762-51 ರೂಪಾಯಿಗಳನ್ನು ಅದನ್ನು ಕೊಟ್ಟಿದ್ದಾರೆ. ಅದನ್ನು ನಾನು ಒಪ್ಪುತ್ತೇನೆ. ಏಕೆಂದರೆ ಇದರಲ್ಲಿ ತಪ್ಪಾಗಿದೆ. ಅದಕ್ಕೆ ಯಾವ ಅಧಿಕಾರಿಗಳು ಕಾರಣಕರ್ತರು? ಎಂಬ ಬಗ್ಗೆ ತನಿಖೆ ಮಾಡಬೇಕೆಂದು ನಮ್ಮ ಸಾರ್ವಜನಿಕ ಶಿಕ್ಷಣ ಇಲಾಖೆಯ ಆಯುಕ್ತರವರಿಗೆ ಹೇಳಿದ್ದೇನೆ. ಎರಡು ವಾರದ ಒಳಗೆ ವರದಿಯನ್ನು ತರಿಸಿ ಯಾರು ತಪ್ಪಿತಸ್ಥರು ಇದ್ದರೂ ಕೂಡಾ ಅವರ ಮೇಲೆ ಕಠಿಣವಾದಂಥ ಕಾರ್ಯಕ್ರಮವನ್ನು ಕೈಗೊಳ್ಳುತ್ತೇನೆ.

ಕಪ್ಪು ಹಲಗೆ ಯೋಜನೆ ಅಡಿಯಲ್ಲಿ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳ ಬಗ್ಗೆ.

1803. ಶ್ರೀ ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕಪ್ಪುಹಲಗೆ ಕಾರ್ಯಾಚರಣೆ ಯೋಜನೆ ಅನ್ವಯ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಕೊಠಡಿಗಳೆಷ್ಟು ?

ಆ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಇಲ್ಲಿಯವರೆಗೆ ನೇಮಕಗೊಂಡಿರುವ ಶಾಲಾ ಅಧ್ಯಾಪಕರ ಸಂಖ್ಯೆ ಎಷ್ಟು (ಭಾಷಾವಾರು ವಿವರ ನೀಡುವುದು)?

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ಖಾಲಿ ಇರುವ ಶಾಲಾ ಉಪಾಧ್ಯಾಯರ ಸಂಖ್ಯೆ ಎಷ್ಟು (ಭಾಷಾವಾರು ವಿವರ ನೀಡುವುದು)?

ಈ) ಖಾಲಿ ಇರುವ ಉಪಾಧ್ಯಾಯರುಗಳ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಆ) ಕಪ್ಪುಹಲಗೆ ಯೋಜನೆ ಅನ್ವಯ ಇಲ್ಲಿಯವರೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ 403 ಕೊಠಡಿಗಳನ್ನು ನಿರ್ಮಿಸಲಾಗಿದೆ. ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿದೆ.

1.ಮೂಡಿಗೆರೆ	102	1ನೇ ಹಂತ 87-88
2.ಕಡೂರು	145	2ನೇ ಹಂತ 88-89
3.ತರೀಕೆರೆ	48	2ನೇ ಹಂತ 88-89
4.ಚಿಕ್ಕಮಗಳೂರು	78	3ನೇ ಹಂತ 89-90
5.ಕೊಪ್ಪ	80	3ನೇ ಹಂತ 89-90
	403	

4ನೇ ಹಂತದ (90-91) ರಲ್ಲಿ ನರಸಿಂಹರಾಜಪುರ-64 ಹಾಗೂ ಶೃಂಗೇರಿ-55 ತಾಲ್ಲೂಕುಗಳಲ್ಲಿ ಕೊಠಡಿಗಳ ನಿರ್ಮಾಣ ಕಾರ್ಯ ಪ್ರಗತಿಯಲ್ಲಿದೆ.

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ ನೇಮಕಗೊಂಡ ಪ್ರಾಥಮಿಕ ಶಾಲಾ ಶಿಕ್ಷಕರ ಭಾಷಾವಾರು ವಿವರ ಈ ಕೆಳಕಂಡಂತಿದೆ.

ವರ್ಷ	ಕನ್ನಡ	ಉರ್ದು	ತಮಿಳು	ಹಿಂದಿ	ಒಟ್ಟು
1988 (ಯೋಜನೇತರ)	238	08	01	-	247
1989 (ಯೋಜನೇತರ)	123	04	-	-	127
1990 (ಯೋಜನೇತರ)	100	-	-	-	100
1991 (ಯೋಜನೇತರ) (ಫೆಬ್ರುವರಿ)	104	-	-	-	104
1991 (ಯೋಜನೇತರ) (ಆಗಸ್ಟ್)	36	08	01	-	45

(ಕಪ್ಪು ಹಲಗೆ ಕಾರ್ಯಾಚರಣೆಯಡಿಯಲ್ಲಿ)

1988-89 ಯೋಜನೆ 1ನೇ ಹಂತ	103	-	-	-	103
1988-90 ಯೋಜನೆ 2ನೇ ಹಂತ	249	-	-	-	249
1989-ಯೋಜನೆ ಕೇಂದ್ರ ಪುರಸ್ಕೃತ ಶಿಕ್ಷಕರ ಯೋಜನೆ	-	-	-	50	50
			ಒಟ್ಟು		1025

ಇ) ಚಿಕ್ಕಮಗಳೂರು ಜಿಲ್ಲೆಯಲ್ಲಿ 31-12-1991 ರಲ್ಲಿದ್ದಂತೆ ಖಾಲಿ ಇರುವ ಪ್ರಾಥಮಿಕ ಶಾಲಾ ಶಿಕ್ಷಕರ ಭಾಷಾವಾರು ವಿವರ ಈ ಕೆಳಕಂಡಂತಿದೆ.

ವಿಷಯ	ಭಾಷೆ	ಶಿಕ್ಷಕರ ಹುದ್ದೆಗಳ ಸಂಖ್ಯೆ
ಯೋಜನೇತರ	ಕನ್ನಡ	244
ಯೋಜನೇತರ	ಉರ್ದು	27
ಯೋಜನೇತರ	ತಮಿಳು	29
ಯೋಜನೇತರ	ಹಿಂದಿ	03
ಯೋಜನೇತರ	ಸಂಸ್ಕೃತ	01
ಯೋಜನೇತರ	ದೈಹಿಕ ಶಿಕ್ಷಕರು	11
ಯೋಜನೇತರ	ವೃತ್ತಿ ಶಿಕ್ಷಕರು	05
ಯೋಜನೇತರ	ಸಂಗೀತ	09
		309

ಇದಲ್ಲದೆ ಕಪ್ಪುಹಲಗೆ ಕಾರ್ಯಾಚರಣೆ ಯೋಜನೆಯಲ್ಲಿ ಮೂರು ಮತ್ತು 4ನೇ ಹಂತದಲ್ಲಿ (207 + 88) ಒಟ್ಟು 295 ಅಧಿಕ ಶಿಕ್ಷಕರ ಹುದ್ದೆಗಳು ಮಂಜೂರಾಗಿದ್ದು ಭರ್ತಿ ಆಗಬೇಕಾಗಿವೆ.

ಈ) 1. ಪ್ರಾಥಮಿಕ ಶಾಲಾ ಶಿಕ್ಷಕರ ನೇಮಕಾತಿಗೆ ಸಂಬಂಧಿಸಿದಂತೆ ಆರ್ಥಿಕ ಮಿತವ್ಯಯವನ್ನು ಸಡಿಲಿಸಲಾಗಿದೆ.

2. ಶಿಕ್ಷಕರ ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡಲಾಗುತ್ತಿದೆ.

3. ನಂತರ ಖಾಲಿ ಇರುವ ಹುದ್ದೆಗಳ ನೇಮಕಾತಿ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಅಧ್ಯಕ್ಷರೇ, ಈ ಆಪರೇಷನ್ ಬ್ಲಾಕ್ ಬೋರ್ಡ್ ಸ್ಕೀಮ್‌ನಲ್ಲಿ ಈಗ ನಮ್ಮಲ್ಲಿ ಸಾಕಷ್ಟು ಕೊಠಡಿಗಳು ಆಗಿರತಕ್ಕಂಥದ್ದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ಈ ಶಿಕ್ಷಕರ ಹುದ್ದೆಗಳನ್ನು ಭರ್ತಿ ಮಾಡುವ ವಿಚಾರದಲ್ಲಿ ಅವರು ಇದರ ಹಿಂದೆ ಬಂದಂಥ ಒಂದು ಪ್ರಶ್ನೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಿರತಕ್ಕಂಥ 604 ಹುದ್ದೆಗಳು ಇನ್ನೂ ಖಾಲಿ ಇವೆ. ನಮ್ಮ ಜಿಲ್ಲೆಯಲ್ಲಿ ಎರಡು ಭಾಗ ಇದೆ. ಒಂದು ಬಯಲು ಸೀಮೆ, ಮತ್ತೊಂದು ಮಲೆನಾಡು ಸೀಮೆ ಎಂದು. ಮಲೆನಾಡು ಭಾಗದ ಅನೇಕ ಕಡೆಗಳಲ್ಲಿ ಆಪರೇಷನ್ ಬ್ಲಾಕ್ ಬೋರ್ಡ್ ಯೋಜನೆ ಕೆಳಗೆ ಕೊಠಡಿಗಳು ನಿರ್ಮಾಣವಾಗಿವೆ. ಆದರೆ ಶಿಕ್ಷಕರ ಒಂದು ಕೊರತೆಯಿಂದ ಅಲ್ಲಿ ಶಿಕ್ಷಕರು ಅಲ್ಲಿಗೆ ಹೋಗುವುದಕ್ಕೆ ಸಾಧ್ಯವಾಗಿಲ್ಲ. ಸ್ಕ್ಯಾಟರ್ಡ್ ಪಾಪ್ಯುಲೇಷನ್ ಎನ್ನುತ್ತಾರಲ್ಲಾ, ಆ ರೀತಿ ಮಲೆನಾಡು ಭಾಗಗಳಲ್ಲಿ ಆಗುತ್ತದೆ. ಕೊಠಡಿಗಳು ಇದ್ದು ವಿದ್ಯಾರ್ಥಿಗಳು ಶಾಲೆಗೆ ಬಂದರೂ ಸಹಾ ಶಿಕ್ಷಕರ ಒಂದು ಕೊರತೆ ಇದೆ. ಆದುದರಿಂದ ಈ ಮಲೆನಾಡು ಭಾಗಗಳಲ್ಲಿ ಇಂಥ ಒಂದು ಶಾಲೆಗಳಿಗೆ ಶಿಕ್ಷಕರ ಒಂದು ನೇಮಕಾತಿ ಮಾಡುವ ಬಗ್ಗೆ ನಾವು ಅನೇಕ ಬಾರಿ ನಾನು ತಾಲ್ಲೂಕು ಸಮಿತಿಯ ಒಬ್ಬ ಅಧ್ಯಕ್ಷನಾಗಿ, ಜಿಲ್ಲಾ ಪರಿಷತ್ತಿನ ಸದಸ್ಯನಾಗಿ ಅನೇಕ ನಿರ್ಣಯವನ್ನು ಮಾಡಿದರೂ ಸಹಾ ಈ ಆಪರೇಷನ್ ಬ್ಲಾಕ್ ಬೋರ್ಡಿನ ಶಾಲೆಗಳಿಗೆ ಶಿಕ್ಷಕರ ನೇಮಕಾತಿಯಾಗಿಲ್ಲ. ಆದುದರಿಂದ ಮಾನ್ಯ ಮಂತ್ರಿಗಳು ಈ ಶಾಲೆಗಳಿಗೆ ತುರ್ತಾಗಿ ಏನಾದರೂ ಶಿಕ್ಷಕರನ್ನು ನೇಮಕ ಮಾಡಿಕೊಡುತ್ತಾರೆಯೇ ಎಂದು ನಾನು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಮಾನ್ಯ ಅಧ್ಯಕ್ಷರೇ, ಈ ಶಿಕ್ಷಕರ ನೇಮಕಾತಿಯ ಬಗ್ಗೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ. ಆದರ ಪ್ರಕಾರ ನಮ್ಮಲ್ಲಿ ಏನು 31.5.91ರ ಹೊತ್ತಿಗೆ 489 ಶಿಕ್ಷಕರ ಹುದ್ದೆಯನ್ನು ತುಂಬಬೇಕಾಗಿದೆ. ಅದನ್ನು ತುಂಬುವುದಕ್ಕೆ ಈಗಾಗಲೇ ನಾವು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಇನ್ನು ಎರಡು ತಿಂಗಳ ಒಳಗಡೆ ಮಾಡುತ್ತೇವೆ. ಅಂದರೆ ಜೂನ್‌ನಲ್ಲಿ ಶಾಲೆ ಪ್ರಾರಂಭವಾಗುವ ಮೊದಲು ಖಾಲಿ ಹುದ್ದೆಗಳನ್ನು ಚಿಕ್ಕಮಗಳೂರು ಡಿಸ್ಟ್ರಿಕ್ಟ್‌ನಲ್ಲಿ ನಾನು ತುಂಬುತ್ತೇವೆ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಅಲ್ಪಸಂಖ್ಯಾತರ ಒಂದು ಶಾಲೆಗಳಲ್ಲಿ 27 ಶಿಕ್ಷಕರ ಹುದ್ದೆಗಳು ಖಾಲಿ ಇದೆ ಎಂದು ಮಾನ್ಯ ಮಂತ್ರಿಗಳು ತಿಳಿಸಿದ್ದಾರೆ. ಕೇವಲ 15 ಜನ ವಿದ್ಯಾರ್ಥಿಗಳು ಇದ್ದ ಪಕ್ಷದಲ್ಲಿ ಅಲ್ಲಿ ಶಿಕ್ಷಕರನ್ನು ನೇಮಿಸಬೇಕೆಂದು ಸರ್ಕಾರಿ ಆದೇಶವೇ ಇದೆ. ಆದರೂ ಸಹ ಇವತ್ತು ನಾವು ನೋಡಿದಹಾಗೆ ಅಲ್ಪಸಂಖ್ಯಾತರ ಉರ್ದು ಪಾಠಶಾಲೆಗಳಲ್ಲಿ ಶಿಕ್ಷಕರ ಹುದ್ದೆಗಳು ಖಾಲಿ ಇವೆ. ಈ ಹುದ್ದೆಗಳನ್ನು ತುರ್ತಾಗಿ ಭರ್ತಿ ಮಾಡಿಕೊಡಬೇಕಾಗಿ ಮಾನ್ಯ ಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ವೀರಪ್ಪ ಮೊಯಿಲಿ : ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

Appointment of Public Prosecutors

1808. SRI SADATH ALI KHAN (Channapatna) : Will the Minister for Law be pleased to state:-

a) the total number of Public Prosecutors appointed by Government in Civil and Criminal Courts (Districtwise information be furnished ;